# ಶುಭವಾರ್ತೆ ಕಥಾಪುಸ್ತಕ

## ಮೂರು



ಇದು ನನ್ನ ಶುಭವಾರ್ತೆ ಮೂರನೆ ಕಥಾಪುಸ್ತಕ

ನನ್ನ ಹೆಸರು


---

ನನ್ನ ಶುಭವಾರ್ತೆ ಮೂರನೆ ಕಥಾಪುಸ್ತಕವನ್ನು ನಾನು ಓದಬಲ್ಲೆ

ಈ ಕಥೆಗಳನ್ನು ಸೃಷ್ಟಿಕರ್ತನಾದ ದೇವರ ಪವಿತ್ರ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ.

ಈ ಕಥಾಪುಸ್ತಕದಲ್ಲಿರುವ ಎಲ್ಲ ಚಿತ್ರಗಳನ್ನು ಭಾರತದ ಬುಡಕಟ್ಟು ಮಕ್ಕಳು ಬರೆದಿದ್ದಾರೆ.
ಶುಭವಾರ್ತೆ ಕಥಾಪುಸ್ತಕ ಮೂರು. ಕಾಪಿರೈಟ್ 2017. ಪ್ರಿಂಟೆಡ್ ಇನ್ ಇಂಡಿಯಾ. ಹೆಚ್ಚಿನ ವಿಷಯಗಳಿಗಾಗಿ ಸಂಪರ್ಕಿಸಿ:
WBTC India, P.O. Box 8478, Bangalore 560084. Email: info@wbtcindia.com





ದುಷ್ಟ ರಾಜ ........................................ 2-27
ಕುರುಬ ಬಾಲಕ ................................ 28-32

# ದುಷ್ಟ ರಾಜ

ಅನೇಕ ವರ್ಷಗಳು ಕಳೆದವು.

ಅಬ್ರಹಾಮನ ಮಕ್ಕಳು, ಅವರ ಮಕ್ಕಳು, ಅವರ ಮಕ್ಕಳು ಮತ್ತು ಅವರ ಮಕ್ಕಳ ಮಕ್ಕಳು ಸೃಷ್ಟಿಕರ್ತನಾದ ದೇವರಿಗೆ ಹಾಡುತ್ತಿರುವುದು ನನಗೆ ಕಾಣುತ್ತಿದೆ.







ಮಕ್ಕಳು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: ‘ಸೃಷ್ಟಿಕರ್ತನಾದ ದೇವರೇ, ದಯವಿಟ್ಟು ನಮ್ಮನ್ನು ಕಾಪಾಡು.’

ದುಷ್ಟ ರಾಜನು ನನಗೆ ಕಾಣುತ್ತಿದ್ದಾನೆ.

ಸೃಷ್ಟಿಕರ್ತನಾದ ದೇವರಿಗೆ
ಹಾಡುತ್ತಿರುವ ಪ್ರತಿಯೊಬ್ಬರನ್ನು
ದುಷ್ಟರಾಜನು ದ್ವೇಷಿಸುತ್ತಾನೆ.







ಇನ್ನೊಬ್ಬ ವ್ಯಕ್ತಿ ನನಗೆ ಕಾಣುತ್ತಿದ್ದಾನೆ.

ಅವನ ಹೆಸರು ಮೋಶೆ.

ಮೋಶೆಯು ಸೃಷ್ಟಿಕರ್ತನಾದ
ದೇವರಿಗೆ ಹಾಡುತ್ತಿದ್ದಾನೆ.

ಮೋಶೆಯು ಬೆಂಕಿಯ ಮರವನ್ನು
ನೋಡುತ್ತಿರುವುದು ನನಗೆ ಕಾಣುತ್ತಿದೆ.

ಸೃಷ್ಟಿಕರ್ತನಾದ ದೇವರು ಬೆಂಕಿಯೊಳಗಿಂದ
ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಮೋಶೆಯೇ, ಸೃಷ್ಟಿಕರ್ತನಾದ ದೇವರು
ಹೀಗೆ ಹೇಳಿದ್ದನ್ನು ದುಷ್ಟ ರಾಜನಿಗೆ ತಿಳಿಸು:
“ನನ್ನ ಜನರು ಸ್ವತಂತ್ರರಾಗಿ ಹೋಗಲಿ!”’







ಮೋಶೆಗೆ ಒಬ್ಬ ಅಣ್ಣನಿದ್ದಾನೆ.

ಅವನ ಹೆಸರು ಆರೋನ.


ಮೋಶೆ ಮತ್ತು ಆರೋನ ದುಷ್ಟ
ರಾಜನ ಬಳಿಗೆ ಹೋಗುತ್ತಿರುವುದು
ನನಗೆ ಕಾಣುತ್ತಿದೆ.

ಮೋಶೆಯು ದುಷ್ಟ ರಾಜನಿಗೆ ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಸೃಷ್ಟಿಕರ್ತನಾದ ದೇವರು ಹೀಗೆ ಹೇಳಿದನು:
“ನನ್ನ ಜನರು ಸ್ವತಂತ್ರರಾಗಿ ಹೋಗಲಿ!”’







ದುಷ್ಟ ರಾಜನು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ: ‘ಸೃಷ್ಟಿಕರ್ತನಾದ
ದೇವರಿಗೆ ಹಾಡುವ ಜನರು ಸ್ವತಂತ್ರರಾಗಿ
ಹೋಗಲು ನಾನು ಬಿಡುವುದಿಲ್ಲ.’

ಸೃಷ್ಟಿಕರ್ತನಾದ ದೇವರು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ಆರೋನನೇ, ನಿನ್ನ ಊರುಗೋಲನ್ನು ಬಿಸಾಡು.'

ಆರೋನನು ತನ್ನ ಊರುಗೋಲನ್ನು ಬಿಸಾಡುತ್ತಿರುವುದು ನನಗೆ ಕಾಣುತ್ತಿದೆ.







ಆರೋನನ ಊರುಗೋಲು ಹಾವಾಗುತ್ತಿರುವುದು ನನಗೆ ಕಾಣುತ್ತಿದೆ.

ಅದು ಬುಸುಗುಟ್ಟುತ್ತಾ...ಬುಸುಗುಟ್ಟುತ್ತಾ... ಬುಸುಗುಟ್ಟುತ್ತಾ ಇದೆ.

ದುಷ್ಟ ರಾಜನು ತನ್ನ ಮಾಂತ್ರಿಕರಿಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ನಿಮ್ಮ ಊರುಗೋಲುಗಳನ್ನು ನೆಲಕ್ಕೆ ಬಿಸಾಡಿ.’

ಮಾಂತ್ರಿಕರು ತಮ್ಮ ಊರುಗೋಲುಗಳನ್ನು ನೆಲಕ್ಕೆ ಬಿಸಾಡುತ್ತಿರುವುದು ನನಗೆ ಕಾಣುತ್ತಿದೆ.







ಮಾಂತ್ರಿಕರ ಊರುಗೋಲುಗಳು
ಹಾವುಗಳಾಗುತ್ತಿರುವುದು
ನನಗೆ ಕಾಣುತ್ತಿದೆ.



ಅವು ಬುಸುಗುಟ್ಟುತ್ತಾ...ಬುಸುಗುಟ್ಟುತ್ತಾ...
ಬುಸುಗುಟ್ಟುತ್ತಾ ಇವೆ.




ಆರೋನನ ಹಾವು ಮಾಂತ್ರಿಕರ ಹಾವುಗಳನ್ನು ತಿನ್ನುತ್ತಾ...ತಿನ್ನುತ್ತಾ...ತಿನ್ನುತ್ತಾ ಇರುವುದು ನನಗೆ ಕಾಣುತ್ತಿದೆ.

ಸೃಷ್ಟಿಕರ್ತನಾದ ದೇವರು
ಅತ್ಯಂತ ಬಲಶಾಲಿ!







ಮೋಶೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಸೃಷ್ಟಿಕರ್ತನಾದ ದೇವರು ಹೀಗೆ ಹೇಳಿದನು:
“ನನ್ನ ಜನರು ಸ್ವತಂತ್ರರಾಗಿ ಹೋಗಲಿ!”’

ದುಷ್ಟ ರಾಜನು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: ‘ಸೃಷ್ಟಿಕರ್ತನಾದ ದೇವರಿಗೆ ಹಾಡುವ ಜನರು ಸ್ವತಂತ್ರರಾಗಿ ಹೋಗಲು ನಾನು ಬಿಡುವುದಿಲ್ಲ.’

ಮೋಶೆಯು ದುಷ್ಟ ರಾಜನಿಗೆ ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಈ ರಾತ್ರಿ ಪ್ರತಿಯೊಂದು ಕುಟುಂಬದ
ಮೊದಲನೆ ಮಗನು ಸಾಯುವನು.’







ಸೃಷ್ಟಿಕರ್ತನಾದ ದೇವರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಮೋಶೆಯೇ, ನನಗೆ ಹಾಡುವ
ನನ್ನ ಜನರಿಗೆ ಒಂದು ಕುರಿಯನ್ನು
ಅರ್ಪಿಸಲು ಹೇಳು.

ಕುರಿಯ ರಕ್ತವನ್ನು ಮನೆಗಳ ಬಾಗಿಲಿನ
ನಿಲುವುಗಳಿಗೆ ಹಚ್ಚು.

ನಾನು ರಕ್ತವನ್ನು ಕಂಡಾಗ, ನನ್ನ ಜನರು
ಸಾಯುವುದಿಲ್ಲ.’

ಸೃಷ್ಟಿಕರ್ತನಾದ ದೇವರಿಗೆ ಹಾಡುವ
ಪ್ರತಿಯೊಬ್ಬರೂ ಕುರಿಯ ರಕ್ತವನ್ನು ತಮ್ಮ
ಮನೆಗಳ ಬಾಗಿಲಿನ ನಿಲುವುಗಳಿಗೆ ಹಚ್ಚುವರು.







ಆ ರಾತ್ರಿ, ಸೃಷ್ಟಿಕರ್ತನಾದ ದೇವರಿಗೆ
ಹಾಡದಿರುವ ಪ್ರತಿಯೊಂದು ಕುಟುಂಬದ
ಮೊದಲನೆ ಮಗನು ಸತ್ತುಹೋದನು.

ಆ ರಾತ್ರಿ, ಸೃಷ್ಟಿಕರ್ತನಾದ ದೇವರಿಗೆ
ಹಾಡುವ ಪ್ರತಿಯೊಂದು ಕುಟುಂಬದ
ಮೊದಲನೆ ಮಗನು ಬದುಕಿಕೊಂಡನು.

ಆ ರಾತ್ರಿ, ಸೃಷ್ಟಿಕರ್ತನಾದ ದೇವರಿಗೆ ಹಾಡುವ ಜನರು ಸ್ವತಂತ್ರರಾಗಿ ಹೋಗಲು ದುಷ್ಟ ರಾಜನು ಬಿಟ್ಟುಕೊಟ್ಟನು.

ಸೃಷ್ಟಿಕರ್ತನಾದ ದೇವರು ಅತ್ಯಂತ ಬಲಶಾಲಿ!







ಕಾಲವಾಯಿತು.

ದುಷ್ಟ ರಾಜನು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ಸೃಷ್ಟಿಕರ್ತನಾದ ದೇವರಿಗೆ ಹಾಡುವ ಜನರನ್ನು ಬೆನ್ನಟ್ಟಿ ಹೋಗಿ ಅವರನ್ನು ಕೊಲ್ಲುವೆ.'

ಬೇಗನೆ, ದುಷ್ಟ ರಾಜ ಮತ್ತು ಅವನ ಸೈನ್ಯದವರು ಬರುತ್ತಿದ್ದಾರೆ...

ಸೃಷ್ಟಿಕರ್ತನಾದ ದೇವರಿಗೆ ಹಾಡುವ ಮೋಶೆ ಮತ್ತು ಜನರು ದೊಡ್ಡ, ದೊಡ್ಡ, ದೊಡ್ಡ ನದಿಯ ಬಳಿ ನಿಂತಿರುವುದು ನನಗೆ ಕಾಣುತ್ತಿದೆ.

ಬೇಗನೆ, ದುಷ್ಟ ರಾಜ ಮತ್ತು ಅವನ ಸೈನ್ಯದವರು ಬರುತ್ತಿದ್ದಾರೆ...







ಮೋಶೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಸೃಷ್ಟಿಕರ್ತನಾದ ದೇವರು ದೊಡ್ಡ, ದೊಡ್ಡ, ದೊಡ್ಡ ನದಿಯ ಮಧ್ಯದಲ್ಲಿ ದಾರಿ ಮಾಡುವನು.


ಸೃಷ್ಟಿಕರ್ತನಾದ ದೇವರು ನಮ್ಮನ್ನು ಕಾಪಾಡುವನು.’

ಸೃಷ್ಟಿಕರ್ತನಾದ ದೇವರು ದೊಡ್ಡ,
ದೊಡ್ಡ, ದೊಡ್ಡ ನದಿಯ ನೀರುಗಳನ್ನು
ಇಬ್ಭಾಗ ಮಾಡಿದನು.

ಸೃಷ್ಟಿಕರ್ತನಾದ ದೇವರಿಗೆ ಹಾಡುವ
ಮೋಶೆ ಮತ್ತು ಜನರು ದೊಡ್ಡ, ದೊಡ್ಡ,
ದೊಡ್ಡ ನದಿಯ ಮಧ್ಯದಲ್ಲಿರುವ ದಾರಿಯಲ್ಲಿ
ನಡೆದುಹೋಗುತ್ತಿರುವುದು ನನಗೆ ಕಾಣುತ್ತಿದೆ!







ದುಷ್ಟ ರಾಜನು ಮತ್ತು ಅವನ
ಸೈನ್ಯದವರು ದೊಡ್ಡ, ದೊಡ್ಡ, ದೊಡ್ಡ
ನದಿಯ ಮಧ್ಯದಲ್ಲಿ ಹಿಂಬಾಲಿಸುತ್ತಿರುವುದು
ನನಗೆ ಕಾಣುತ್ತಿದೆ.

ದುಷ್ಟ ರಾಜ ಮತ್ತು ಅವನ
ಸೈನ್ಯದವರ ಮೇಲೆ ನೀರು
ನುಗ್ಗುತ್ತಿರುವುದು ನನಗೆ ಕಾಣುತ್ತಿದೆ.

ದುಷ್ಟ ರಾಜ ಮತ್ತು ಅವನ
ಸೈನ್ಯದವರು ಸತ್ತುಹೋದರು.







ಸೃಷ್ಟಿಕರ್ತನಾದ ದೇವರಿಗೆ
ಹಾಡುವ ಮೋಶೆ ಮತ್ತು ಜನರು
ಸ್ವತಂತ್ರರಾದದ್ದು ನನಗೆ ಕಾಣುತ್ತಿದೆ.

ಸೃಷ್ಟಿಕರ್ತನಾದ ದೇವರು
ಅತ್ಯಂತ ಬಲಶಾಲಿ!

# ಕುರುಬ ಬಾಲಕ


ಕುರುಬ ಬಾಲಕ ನನಗೆ ಕಾಣುತ್ತಿದ್ದಾನೆ.

ಅವನ ಹೆಸರು ದಾವೀದ.

ದಾವೀದನು ಅಬ್ರಹಾಮನ ಕುಟುಂಬದವನು.

ಅನೇಕ ವರ್ಷಗಳು ಕಳೆದವು.

ಕುರುಬ ಬಾಲಕನಾದ ದಾವೀದ ಈಗ
ರಾಜನಾಗಿದ್ದಾನೆ.







ದಾವೀದ ರಾಜನು ಸೃಷ್ಟಿಕರ್ತನಾದ
ದೇವರಿಗೆ ಹಾಡುತ್ತಿರುವುದು
ನನಗೆ ಕೇಳಿಸುತ್ತಿದೆ.

‘ಸೃಷ್ಟಿಕರ್ತನಾದ ದೇವರೇ,
ನನಗೆ ಪ್ರತಿಯೊಂದೂ ನೀನೇ ಆಗಿರುವೆ.

ಸೃಷ್ಟಿಕರ್ತನಾದ ದೇವರೇ,
ನನಗೆ ಜೀವ ಕೊಡುವಾತನು ನೀನೇ.

ಸೃಷ್ಟಿಕರ್ತನಾದ ದೇವರೇ,
ನನಗೆ ಶಾಂತಿ ಕೊಡುವಾತನು ನೀನೇ.

ಸೃಷ್ಟಿಕರ್ತನಾದ ದೇವರೇ,
ನನ್ನನ್ನು ಕಾಪಾಡುವಾತನು ನೀನೇ.

ಸೃಷ್ಟಿಕರ್ತನಾದ ದೇವರೇ,
ನನ್ನನ್ನು ರಕ್ಷಿಸುವಾತನು ನೀನೇ.







ಸೃಷ್ಟಿಕರ್ತನಾದ ದೇವರೇ,
ನನ್ನನ್ನು ಪ್ರೀತಿಸುವಾತನು ನೀನೇ.

ಸೃಷ್ಟಿಕರ್ತನಾದ ದೇವರೇ,
ನೀನು ಸದಾಕಾಲ ಮತ್ತು
ಎಂದೆಂದಿಗೂ ನನ್ನೊಂದಿಗಿರುವೆ.'

ಸೃಷ್ಟಿಕರ್ತನಾದ ದೇವರು ದಾವೀದ ರಾಜನಿಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ನಿನ್ನ ಕುಟುಂಬದ ಮೂಲಕವಾಗಿ ನಾನು ಪ್ರತಿಯೊಬ್ಬರನ್ನೂ ಸದಾಕಾಲ ಮತ್ತು ಎಂದೆಂದಿಗೂ ಕಾಪಾಡುವೆ.’

ಸೃಷ್ಟಿಕರ್ತನಾದ ದೇವರು ಬರುತ್ತಿದ್ದಾನೆ.

